UASB LIBRARY
Newspaper Clippings
Pg .1 Friday 24-09-2021 Jai Kisan



ಹೆಕ್ಸಾಗಾನ್ ಮ್ಯಾನ್ಯುಫ್ಯಾಕ್ಚರಿಂಗ್ ಇಂಟಲಿಜೆನ್ಸ್ ಜತೆ ಒಪ್ಪಂದ

ಸ್ಮಾರ್ಟ್ ಕೃಷಿ ಕೇಂದ್ರ ಸ್ಥಾಪನೆಗೆ ಒಡಂಬಡಿಕೆ

■ **ವಿಜಯವಾಣಿ ಸುದ್ದಿಜಾಲ, ಬೆಂಗಳೂರು:** ರಾಜ್ಯದಲ್ಲಿ ಕೃಷಿ ಚಟುವಟಿಕೆಗಳ ಕೌಶಲ್ಯ ಬಲವರ್ಧನೆಗಾಗಿ ಸ್ಮಾರ್ಟ್ ಕೃಷಿ ಕೇಂದ್ರಗಳನ್ನು ಪ್ರಾರಂಭಿಸಲು ಸರ್ಕಾರ ಹೆಕ್ಸಾಗಾನ್ ಮ್ಯಾನ್ಯುಫ್ಯಾಕ್ಚರಿಂಗ್ ಇಂಟಲಿಜೆನ್ಸ್ ಇಂಡಿಯಾ ಸಂಸ್ಥೆಯ ಜತೆ ಒಡಂಬಡಿಕೆ ಮಾಡಿಕೊಂಡಿದೆ.



ರಾಜ್ಯದ 4 ಕೃಷಿ ವಿಶ್ವವಿದ್ಯಾಲಯಗಳಲ್ಲಿ 7 ಸ್ಮಾರ್ಟ್ ಕೃಷಿ ಕೇಂದ್ರಗಳನ್ನು ತೆರೆದು ಕೃಷಿಯಲ್ಲಿ ಆವಿಷ್ಕಾರ ಹಾಗೂ ಅಭಿವೃದ್ಧಿ ಸಾಧಿಸುವ ಗುರಿಯನ್ನು ಹೊಂದಿದೆ. ಒಟ್ಟು 770 ಕೋಟಿ ರೂಪಾಯಿಗಳ ಹೂಡಿಕೆಯೊಂದಿಗೆ ಕೇಂದ್ರಗಳನ್ನು ಹೆಕ್ಸಾಗಾನ್ ಪ್ರಾರಂಭಿಸಲಿದೆ. ಶೇ.85 ಅನುದಾನವನ್ನು ಹೆಕ್ಸಗಾನ್ ಕಂಪನಿಯು ಹೂಡಿಕೆ ಮಾಡಿದರೆ ರಾಜ್ಯ ಸರ್ಕಾರವು ಇನ್ನುಳಿದ ಶೇ.15 ಅನುದಾನ ಒದಗಿಸಬೇಕಾಗುತ್ತದೆ. ಬೆಂಗಳೂರು, ಚಾಮರಾಜನಗರ, ಶಿವಮೊಗ್ಗ, ಧಾರವಾಡ, ವಿಜಯಪುರ, ಹನುಮನಮಟ್ಟಿ ಹಾಗೂ ಗಂಗಾವತಿಯಲ್ಲಿ ಸ್ಮಾರ್ಟ್ ಕೃಷಿ ಕೇಂದ್ರಗಳ ಸ್ಥಾಪನೆಯಾಗಲಿವೆ.

ವಿಕಾಸಸೌಧದ ಸಭಾಂಗಣದಲ್ಲಿ ಗುರುವಾರ ಹೆಕ್ಸಗಾನ್ ಕಂಪೆನಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀಧರ್ ಧರ್ಮರಾಜನ್ ಅವರೊಂದಿಗೆ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಈ ಸಂದರ್ಭದಲ್ಲಿ ಕೃಷಿ ಸಚಿವ ಬಿ.ಸಿ.ಪಾಟೀಲ್ ಮಾತನಾಡಿ, ಕೃಷಿ ಅಭಿವೃದ್ಧಿಯಲ್ಲಿ ರಾಜ್ಯ ಮಹತ್ವದ ಹೆಜ್ಜೆಇಟ್ಟಿದ್ದು, ದೇಶದಲ್ಲಿಯೇ ಮೊದಲ ಸ್ಥಾನವನ್ನು ಪಡೆದಿದೆ. ಪ್ರಧಾನಿ ನರೇಂದ್ರ ಮೋದಿಯವರ ಕನಸಾಗಿರುವ ರೈತರ ಆದಾಯವನ್ನು ದ್ವಿಗುಣಗೊಳಿಸುವ ಯೋಜನೆಗೆ ಪೂರಕವಾಗಿ ರಾಜ್ಯ ಸರ್ಕಾರವು ಈ ಮಹತ್ವದ ಒಡಂಬಡಿಕೆಯನ್ನು ಮಾಡಿಕೊಂಡಿದೆ ಎಂದರು.

ಏನಿದು ಒಡಂಬಡಿಕೆ: ಸ್ಮಾರ್ಟ್ ಕೃಷಿ ಕೇಂದ್ರಗಳು 3 ವರ್ಷಗಳ ಅವಧಿಯಲ್ಲಿ ರೈತರಿಗೆ, ವಿದ್ಯಾರ್ಥಿಗಳಿಗೆ, ಉದ್ದಿಮೆದಾರರಿಗೆ ಹಾಗೂ ವಿಜ್ಞಾನಿಗಳಿಗೆ ಮುಂದಿನ ಆಧುನಿಕ ಕೃಷಿಗೆ ಬೇಕಾಗುವ ಭವಿಷ್ಯದ ಕೌಶಲ್ಯಗಳು, ಹೊಸ ತಂತ್ರಜ್ಞಾನ ಮತ್ತು ಉತ್ಕೃಷ್ಟ ಇಂಜಿನಿಯರಿಂಗ್ ತಂತ್ರಜ್ಞಾನ, ಪ್ರಾತ್ಯಕ್ಷಿಕೆ ಹಾಗೂ ಕಲಿಕೆ ಮೂಲಕ ತರಬೇತಿ ನೀಡುವುದು.

ಕಂಪೆನಿ ಒದಗಿಸುವ ಆವಿಷ್ಕಾರಕ ತಂತ್ರಜ್ಞಾನಗಳಿಂದ ಯಂತ್ರೋಪಕರಣಗಳ ನಿಖರ ಉಪಯೋಗದಿಂದ ಕೃತಕ ಬುದ್ಧಿವಂತಿಕೆ ಬಳಸಿ, ರೋಬೋಟಿಕ್ ಬಳಕೆ, ಅಭಿವೃದ್ಧಿಪಡಿಸಿದ ಡಾಟಾವನ್ನು ಬುದ್ಧಿವಂತಿಕೆಯಿಂದ ಬಳಸುವ ಯೋಜನೆಯನ್ನು ಕ್ಷೇತ್ರ ಮಟ್ಟದ ಕೃಷಿ ಚಟುವಟಿಕೆಗಳನ್ನು ನಿಖರ ಬೇಸಾಯ ಪದ್ಧತಿಯಲ್ಲಿ ಮಾಡಲು ರೂಪಿಸಲಾಗಿದೆ. ನೂತನ ಯೋಜನೆಯಲ್ಲಿ ಕ್ಷೇತ್ರಮಟ್ಟದ ಪ್ರಾಯೋಗಿಕ ಕೌಶಲ್ಯಗಳನ್ನು ಕೃಷಿಯಲ್ಲಿ ಆಟೋಮೆಷನ್ ತರುವ ಹಾಗೂ ಸ್ಥಳೀಯ ಬೇಡಿಕೆಗೆ ಅನುಗುಣವಾಗುವಂತೆ ಪಠ್ಯಕ್ರಮಗಳನ್ನು ಕ್ಷೇತ್ರ ಮಟ್ಟದ ಪ್ರಾಯೋಗಿಕ ವಿಷಯಗಳಾದ ಮಣ್ಣು, ಹವಾಮಾನ, ಸ್ಥಳೀಯ ಕ್ಷೇತ್ರ ಪದ್ಧತಿಗಳನ್ನು ಸುಧಾರಣೆ ಮಾಡಿ ತರಬೇತುದಾರರಿಗೆ ತರಬೇತಿ ನೀಡುತ್ತಾ ಗ್ರಾಮೀಣ ಬದುಕನ್ನು ಮತ್ತು ಗ್ರಾಮಸ್ಥರನ್ನು ಹಾಗೂ ಕೃಷಿ ಉದ್ದಿಮೆದಾರರೊಂದಿಗೆ ಸೌಹಾರ್ದತೆಯಿಂದ ಕೃಷಿ ಅಭಿವೃದ್ಧಿಗಾಗಿ ಪೂರಕ ವಾತಾವರಣವನ್ನು ನಿರ್ಮಿಸುವ ಉದ್ದೇಶ ಹೊಂದಿದೆ. ಕೃಷಿ ಇಲಾಖೆಯ ಅಪರ ಮುಖ್ಯಕಾರ್ಯದರ್ಶಿ ರಾಜಕುಮಾರ್ ಖತ್ರಿ, ಕೃಷಿ ಇಲಾಖೆ ನಿರ್ದೇಶಕ ಬಿ.ವೈ. ಶ್ರೀನಿವಾಸ್ ಸೇರಿದಂತೆ ಕೃಷಿ ವಿಶ್ವವಿದ್ಯಾಲಯದ ಉಪಕುಲಪತಿಗಳು ಪಾಲ್ಗೊಂಡಿದ್ದರು.

ಚಿನ್ನದ ಪದಕ ಗೆದ್ದ ಜಿಕೆವಿಕೆ ವಿದ್ಯಾರ್ಥಿನಿ

ಗುಡಿಬಂಡೆ: ಬೆಂಗಳೂರಿನ ಜಿಕೆವಿಕೆ ಕೃಷಿ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಪಟ್ಟಣದ ಜಿ.ಎ.ನಂದಿನಿ ಎಂಬ ವಿದ್ಯಾರ್ಥಿನಿ ಪ್ಲಾಂಟ್ ಬಯೋಕೆಮಿಸ್ಟ್ರಿ ಎಂಬ ಅಧ್ಯಯನಕ್ಕೆ ಸಂಬಂಧಿಸಿದಂತೆ ರಾಷ್ಟ್ರಮಟ್ಟದಲ್ಲಿ ಎರಡು ಚಿನ್ನದ ಪದಕಗಳನ್ನು ಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿ ಕೊಟ್ಟಿದ್ದಾರೆ.

ಯುಎಸ್‌ಎ ಗೋಲ್ಡ್ ಮೆಡಲ್ ಫಾರ್ ಜನರಲ್ ಮೆರಿಟ್ ಮತ್ತು ಡಾ. ಎಲ್. ಸುದರ್ಶನ ಗೋಲ್ಡ್ ಮೆಡಲ್ ಎಂಬ ಎರಡು ಚಿನ್ನದ ಪದಕ ಗಳನ್ನು ಗಳಿಸಿ ವಿದ್ಯಾರ್ಥಿನಿ ಹುಟ್ಟೂರಾದ ಗುಡಿಬಂಡೆಯ ಕೀರ್ತಿಯನ್ನು ರಾಷ್ಟ್ರಮಟ್ಟದಲ್ಲಿ ಸಾರಿದ್ದಾರೆ. ಅವರ ಈ ಸಾಧನೆಗೆ ಅವರ ಪೋಷಕರೂ, ಕುಟುಂಬ ಸ್ಥರೂ ಸೇರಿದಂತೆ ಶಿಕ್ಷಕರು, ಹಲವು ಸಂಘ ಸಂಸ್ಥೆಗಳು ಅಭಿನಂದನೆ ಸಲ್ಲಿಸಿವೆ.



ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಪದವಿ ಪೂರ್ವ ಶಿಕ್ಷಣ ಮುಗಿಯುತ್ತಿದ್ದಂತೆ ಎಲ್ಲ ಮಕ್ಕಳು ಬೇಗ ಆಯ್ಕೆ ಮಾಡುವುದು ಇಂಜನಿಯರಿಂಗ್. ಆದರೆ ನಂದಿನಿಯಂತಹ ವಿದ್ಯಾರ್ಥಿಗಳು ರೈತ ಕುಟುಂಬದಿಂದ ಬಂದು ರಾಜ್ಯಮಟ್ಟದಲ್ಲಿ ಎರಡು ಚಿನ್ನದ ಪದಕ ಗಳಿಸುವ ಸಾಧನೆ ಮಾಡಿರುವುದು ಶ್ಲಾಘನೀಯ.

■ ವೆಂಕಟೇಶಪ್ಪ, ಗುಡಿಬಂಡೆ

ಪದವಿಯಲ್ಲಿದ್ದಾಗಲೇ ಚಿನ್ನದ ಪದಕ ವನ್ನು ಪಡೆಯಬೇಕೆಂದು ನಿರ್ಧರಿಸಿ ತುಂಬಾ ಪ್ರಯತ್ನಪಟ್ಟಿದ್ದೆ. ಆದರೆ ಅದು ಸಫಲವಾಗಲಿಲ್ಲವಾದ್ದರಿಂದ ಸ್ನಾತಕೋತ್ತರ ಪದವಿಯಲ್ಲಿ ಪಡೆಯಲೇ ಬೇಕೆಂದು ನನ್ನ ಗುರಿಯಾಗಿತ್ತು. ರಾಜ್ಯ ಮಟ್ಟದಲ್ಲಿ ಎರಡು ಚಿನ್ನದ ಪದಕಗಳಿಸಿರುವುದು ತುಂಬಾ ಸಂತಸ ತಂದಿದೆ.

■ ನಂದಿನಿ ಬಿ.ಎ.
ಚಿನ್ನದ ಪದಕ ವಿಜೇತೆ, ಗುಡಿಬಂಡೆ

24-09-2021
Vv Pg 12

For more information visit
University Library Website
Web - uasbagrilibindia.org
E-mail- librarian@uasbangalore.edu.in

24-09-2021
Hd Pg 08

"Strong people don't put others down, they lift them up"

ಅಕಾಲಿಕ ಹೂ ತೆಗೆದ ಮಾವು ಬೆಳೆಗಾರ

• ಆರ್.ಚೌಡರೆಡ್ಡಿ

ಶ್ರೀನಿವಾಸಪುರ: ತಾಲ್ಲೂಕಿನ ನೀಲಟೂರು ಗ್ರಾಮದ ಮಾವು ಬೆಳೆಗಾರರೊಬ್ಬರು ವೈಜ್ಞಾನಿಕ ವಿಧಾನ ಬಳಸಿ ಅಕಾಲದಲ್ಲಿ ಮಾವಿನ ಹೂ ತೆಗೆಯುವುದರ ಮೂಲಕ ಗಮನ ಸೆಳೆದಿದ್ದಾರೆ.

ಪ್ರಗತಿಪರ ರೈತ ಚಂದ್ರಶೇಖರ್ ಕಳೆದ ಏಪ್ರಿಲ್‌ನಲ್ಲಿ ಮಾವಿನ ಮರಗಳ ಬುಡದ ಸುತ್ತಲೂ 'ಕಲ್ಟಾರ್' ಎಂಬ ಔಷಧಿ ಸುರಿಯುವ ಮೂಲಕ ಅಕಾಲದಲ್ಲಿ ಮಾವಿನ ಫಸಲು ಪಡೆಯುವ ಪ್ರಯತ್ನ ಮಾಡಿದ್ದರು. ಈಗ ಅವರ ಪ್ರಯತ್ನ ಸಫಲವಾಗಿದೆ. ಮರಗಳು ಹೂವನ್ನು ಮುಡಿಗೇರಿಸಿಕೊಂಡು ಕಂಗೊಳಿಸುತ್ತಿವೆ.

ಕೃಷಿ ಹಾಗೂ ತೋಟಗಾರಿಕಾ ಕ್ಷೇತ್ರದಲ್ಲಿ ಪ್ರಯೋಗಶೀಲರಾದ ಚಂದ್ರಶೇಖರ್, ಪ್ರತಿವರ್ಷ ಮಾವಿನ ಕಾಯಿ ಬೆಲೆ ಕುಸಿತದಿಂದ ಬೇಸತ್ತು ಆನ್‌ಲೈನ್ ಮೂಲಕ ಮಾವು ವಹಿವಾಟು ಮಾಡಿ ಲಾಭ ಮಾಡಿಕೊಂಡಿದ್ದರು. ಅಕಾಲದಲ್ಲಿ ಮಾವು ಬೆಳೆದು ಉತ್ತಮ ಬೆಲೆ ಪಡೆಯುವ ಬಗ್ಗೆ ಚಿಂತನೆ ನಡೆಸಿದರು. ಅದಕ್ಕೆ ಪೂರಕವಾಗಿ ಮಾವು ತಜ್ಞರನ್ನು ಭೇಟಿ ಮಾಡಿ ಚರ್ಚಿಸಿದರು. ತಜ್ಞರ ಸಲಹೆಯಂತೆ 'ಕಲ್ಟಾರ್' ಔಷಧಿ ಬಳಸಿದರು.

ನಿರೀಕ್ಷೆಯಂತೆ 'ಕಲ್ಟಾರ್' ಭೂಮಿಗೆ ಸೇರಿಸಿದ 90 ದಿನಗಳಲ್ಲಿ ಮರಗಳಲ್ಲಿ ಹೂ ಬಂದಿತ್ತು. ಆದರೆ, ಆ ಸಮಯದಲ್ಲಿ ಸುರಿದ ಭಾರಿ ಮಳೆಯಿಂದಾಗಿ ಹೂ ಉದುರಿ ನೆಲಕಚ್ಚಿತು. ಆದರೆ, ಕಲ್ಟಾರ್ ಪ್ರಭಾವದಿಂದಾಗಿ ಮತ್ತೆ ಹೂ ಬಂದಿದೆ. ಹೂ ಆರೋಗ್ಯವಾಗಿದೆ. ಶಿಲೀಂಧ್ರನಾಶಕ ಸಿಂಪಡಣೆ ಮಾಡಿದರೆ ಸಾಕು ಕಾಯಿ ಕಟ್ಟುತ್ತದೆ ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಜಿಲ್ಲೆಯಲ್ಲಿಯೇ ಮೊದಲ ಬಾರಿಗೆ ಪ್ರಯೋಗಾತ್ಮಕವಾಗಿ ಎರಡೂವರೆ ಎಕರೆ ವಿಸ್ತೀರ್ಣದಲ್ಲಿ ಬೆಳೆಯಲಾಗಿರುವ ಮಾವಿನ ಮರಗಳಿಗೆ 'ಕಲ್ಟಾರ್' ಬಳಸಿ ಹೂ ತರಿಸಿದ್ದಾರೆ. ಡಿಸೆಂಬರ್‌ನಲ್ಲಿ ಫಸಲು ಬರುವ ನಿರೀಕ್ಷೆಯಿದೆ. ಅಂದರೆ ಅದು ಸ್ವಲ್ಪ ಹೆಚ್ಚು ಕಡಿಮೆ ಸಕಾಲಿಕ ಹೂ ಬರುವ ಕಾಲ. ಸಾಮಾನ್ಯವಾಗಿ ಡಿಸೆಂಬರ್ ಕೊನೆ ಅಥವಾ ಜನವರಿಯಲ್ಲಿ ಮಾವಿನ ಹೂ ಬರುತ್ತದೆ.

'ಹೂ ಬರುವ ಕಾಲದಲ್ಲಿ ಕಾಯಿ ಕೊಯ್ಲಿಗೆ ಬರುತ್ತದೆ. ಹಾಗಾಗಿ ಮಾವಿನ ಹಣ್ಣಿಗೆ ಒಳ್ಳೆಯ ಬೆಲೆ ಸಿಗುತ್ತದೆ. ತೋತಾಪುರಿ ಜಾತಿಯ ಮಾವು ಕೆ.ಜಿಯೊಂದಕ್ಕೆ ₹ 70 ರಿಂದ ₹ 100 ರವರೆಗೆ ಮಾರಾಟವಾಗುವ ನಿರೀಕ್ಷೆ ಇದೆ. ಕಳೆದ ವರ್ಷ ತಮಿಳುನಾಡಿನಲ್ಲಿ ಅಕಾಲದಲ್ಲಿ ಬೆಳೆದ ತೋತಾಪುರಿ ಮಾವು ಕೆ.ಜಿಯೊಂದಕ್ಕೆ ₹ 140 ಹಾಗೂ ಬಾದಾಮಿ ಮಾವು ₹ 280ರಂತೆ ಮಾರಾಟವಾಗಿತ್ತು' ಎಂದು ಚಂದ್ರಶೇಖರ್ ಮಾಹಿತಿ ನೀಡಿದರು.





ಚಂದ್ರಶೇಖರ್

'ವೈಜ್ಞಾನಿಕ ವಿಧಾನ ಬಳಸಿ ವರ್ಷಕ್ಕೆ ಎರಡು ಮಾವಿನ ಫಸಲು ಪಡೆದು ಕೊಳ್ಳಬಹುದು. ಆದರೆ, ಮರಗಳ ಹಿತದೃಷ್ಟಿಯಿಂದ ವರ್ಷ ಬಿಟ್ಟು ವರ್ಷ ಅಕಾಲಿಕ ಫಸಲು ಬೆಳೆಯುವುದು ಕ್ಷೇಮಕರ. ಅಕಾಲಿಕ ಮಾವು ಮಾರಾಟಕ್ಕೆ ಮಾರುಕಟ್ಟೆ ಸಮಸ್ಯೆ ಉಂಟಾಗುವುದಿಲ್ಲ. ಮಾವಿನ ಕಾಯಿ ಅಪರೂಪವಾಗಿರುವ ಸಂದರ್ಭದಲ್ಲಿ ಮಾವು ಪ್ರಿಯರು ಖರೀದಿಗೆ ಮುಗಿಬೀಳುತ್ತಾರೆ. ಆನ್‌ಲೈನ್ ವ್ಯವಹಾರದಿಂದ ಹೆಚ್ಚು ಲಾಭಗಳಿಸಬಹುದಾಗಿದೆ' ಎಂದರು.

'ಬೇರೆ ಬೇರೆ ಕಾರಣಗಳಿಂದ ಪ್ರತಿವರ್ಷ ಮಾವಿನ ಬೆಲೆ ಕುಸಿತಕ್ಕೆ ಒಳಗಾಗುತ್ತಿದೆ. ಮಾವು ಬೆಳೆಗಾರರು ನಷ್ಟ ಅನುಭವಿಸುತ್ತಿದ್ದಾರೆ. ವೈಜ್ಞಾನಿಕ ವಿಧಾನ ಅನುಸರಿಸಿ, ಅಕಾಲದಲ್ಲಿ ಫಸಲು ತೆಗೆದರೆ ಕಷ್ಟಕ್ಕೆ ತಕ್ಕ ಪ್ರತಿಫಲ ಸಿಗುವ ನಿರೀಕ್ಷೆ ಇದೆ. ಚಂದ್ರಶೇಖರ್ ಅವರ ತೋಟದಲ್ಲಿ ಅಕಾಲದಲ್ಲಿ ಬಂದಿರುವ ಹೂ ಇತರ ಮಾವು ಬೆಳೆಗಾರರ ಕಣ್ಣು ಕುಕ್ಕುತ್ತಿದೆ. ಅವರು ಮಾಡಿರುವ ಪ್ರಥಮ ಪ್ರಯತ್ನ ಇತರ ರೈತರಿಗೆ ಪ್ರೇರಣೆ ಆಗುವುದರಲ್ಲಿ ಎರಡು ಮಾತಿಲ್ಲ' ಎನ್ನುತ್ತಾರೆ ಮಾವು ಕೃಷಿಕ ಎನ್. ಶ್ರೀರಾಮರೆಡ್ಡಿ.

ಬಳಕೆಗೆ ವಿವೇಚನೆ ಅಗತ್ಯ: 'ಕಲ್ಟಾರ್ ಅನ್ನು ವಿವೇಚನೆಯಿಂದ ಬಳಸಬೇಕು. ಅಕಾಲದಲ್ಲಿ ಫಲ ಪಡೆದು ಲಾಭಗಳಿಸುವ ಉದ್ದೇಶದಿಂದ ಅತಿಯಾಗಿ ಬಳಸಿದರೆ ಮರಗಳು ಸಹಜವಾಗಿ ಹೂ ಬಿಡುವ ಶಕ್ತಿ ಕಳೆದುಕೊಳ್ಳುವ ಅಪಾಯವಿದೆ. ಆಯಸ್ಸು ಕಡಿಮೆ ಆಗಬಹುದು. ಅನಿವಾರ್ಯ ಸಂದರ್ಭದಲ್ಲಿ ಮಾತ್ರ ಈ ಔಷಧ ಬಳಸಬೇಕು. 5 ರಿಂದ 6 ವರ್ಷಗಳಿಗೊಮ್ಮೆ ಈ ಔಷಧ ಬಳಸಿದರೆ ಒಳ್ಳೆಯದು. ಇಂತಹ ಹಣ್ಣು ಸೇವನೆಯಿಂದ ದೇಹದ ಮೇಲೆ ಯಾವುದೇ ದುಷ್ಪರಿಣಾಮ ಉಂಟಾಗುವುದಿಲ್ಲ' ಎಂದು ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕ ಶ್ರೀನಿವಾಸ್ 'ಪ್ರಜಾವಾಣಿ'ಗೆ ತಿಳಿಸಿದರು.

ಏನಿದು 'ಕಲ್ಟಾರ್?'

ಕಲ್ಟಾರ್ ಮರಗಳಲ್ಲಿ ಹೂ ಬರುವಂತೆ ಮಾಡುವ ಒಂದು ಹಾರ್ಮೋನ್. ಮುಖ್ಯವಾಗಿ ಬರಡಾದ ಯಾವುದೇ ಹಣ್ಣಿನ ಮರಗಳಲ್ಲಿ ಹೂ ತರಿಸಲು ಬಳಸಲಾಗುತ್ತದೆ. ಇದು ಕೀಟನಾಶಕ ಮಾರಾಟ ಮಾಡುವ ಅಂಗಡಿಗಳಲ್ಲಿ ಸಿಗುತ್ತದೆ.

ಇದನ್ನು ಪ್ರತಿ ಲೀಟರ್ ನೀರಿಗೆ 1 ಎಂಎಲ್‌ನಂತೆ ಬೆರೆಸಬೇಕು. ಮಾವಿನ ಮರದ ಬುಡದ ಸುತ್ತ 7 ರಿಂದ 8 ಅಡಿ ದೂರದಲ್ಲಿ ಒಂದು ಅಡಿ ಆಳದ ಕಾಲುವೆ ನಿರ್ಮಿಸಿ ಫಸಲು ಕೊಡುವ ಮರದ ವಯಸ್ಸಿಗೆ ತಕ್ಕಂತೆ 12 ರಿಂದ 15 ಲೀಟರ್ ದ್ರಾವಣವನ್ನು ಕಾಲುವೆಯಲ್ಲಿ ಸುರಿದು ಮಣ್ಣು ಮುಚ್ಚಬೇಕು. ತೇವಾಂಶ ಇರುವಂತೆ ನೋಡಿಕೊಳ್ಳಬೇಕು. ಔಷಧೋಪಚಾರ ಮಾಡಿದ 90 ದಿನಗಳಲ್ಲಿ ಹೂ ಬರುತ್ತದೆ.

24-09-2021 Pv Pg 04

Karnataka ranks 9th in food safety among 20 large states

Crippled by staff crunch; lags behind TN, Kerala

SURAKSHA P
BENGALURU, DHNS

Karnataka is ranked ninth among 20 large states by the Food Safety and Standards Authority of India (FSSAI) in the recently released State Food Safety Index for 2020-21.

Neighbouring states of Kerala and Tamil Nadu are ranked second and third respectively.

The Index measures the performance of states and Union territories on significant parameters of food safety, like inspections carried out for high-risk food businesses, mode of inspections used and the number of food samples lifted for testing.

For example, though the state has 44,501 registered food business units active as of July 31, the number of food samples collected and analysed for adulteration, safety, and standards for 12 months in 2018-19 was just 3,945 as per the annual food testing report of enforcement samples. Only 456 were found to be adulterated.

As of 2019, there were only 49 full-time Food Safety Officers (FSOs), and 114 part-time ones. There are five state-run food-testing labs but none are National Accreditation Board for Testing and Calibration Laboratories (NABL) accredited.

Dr Harshvardhan B, joint commissioner, Food Safety Commissionerate, told *DH*, "The state government has not released the budget for us. Now, we have placed various work orders. By December or January, we have been asked to get NABL accreditation for Mysuru, Bengaluru, and Belagavi labs."



The State Food Safety Index for 2020-21 measures the performance of states and Union territories on significant parameters of food safety, like inspections carried out for high-risk food businesses, mode of inspections used and the number of food samples lifted for testing. DH FILE PHOTO

"A consultant has also been appointed in this regard. We did not have a building in Kalaburagi for a lab and have rented one there."

The state has scored only 10 out of 20 in human resources and institutional data in the index.

"We are awaiting the amendment of Cadre and Recruitment Rules, for which we had requested a modification. Until then, no permanent staff can be hired. The entire food safety department is staffed by in-charge officers from the health department," he added.

Ramesh Agarwal, CEO, Food Safety Works, a training partner of FSSAI, said, "Kerala and Tamil Nadu have scored high on enforcement. In fact, Kerala scores higher than Gujarat ranked No.1 in compliance. There is no monitoring of expired licences. There is no inspection of meat industries which are high-risk food businesses. We don't know the status of the mobile food testing lab."

Out of 30, Karnataka has scored 13 in compliance which is less than 50%. Training and capacity building of laboratory staff and personnel have also been found wanting in the state. As far as hygiene rating of restaurants and checks on food offered at places of worship are concerned, it has been very slow, said Agarwal.

24-09-2021 Dec Hrd Pg 03

ಕೃಷಿ ಕೌಶಲ್ಯ ಬಲವರ್ಧನೆಗೆ ಒಡಂಬಡಿಕೆ



ಬೆಂಗಳೂರು: ಕೃಷಿ ಚಟುವಟಿಕೆಗಳ ಕೌಶಲ್ಯ ಬಲವರ್ಧನೆಗೆ ಸ್ಮಾರ್ಟ್ ಕೃಷಿ ಕೇಂದ್ರಗಳನ್ನು ಪ್ರಾರಂಭಿಸಲು ಕರ್ನಾಟಕ ಸರ್ಕಾರ ಮಹತ್ವದ ಹೆಜ್ಜೆಯಿಟ್ಟಿದ್ದು, ಈ ನಿಟ್ಟಿನಲ್ಲಿ ಹೆಕ್ಸಾನ್ ಮ್ಯಾನ್ಯುಫ್ಯಾಕ್ಚರಿಂಗ್ ಇಂಟಲಿಜೆನ್ಸ್ ಇಂಡಿಯಾ ಕಂಪನಿ ಜೊತೆ ಕೃಷಿ ಇಲಾಖೆ ಒಡಂಬಡಿಕೆ ಮಾಡಿಕೊಂಡಿದೆ.

ವಿಕಾಸಸೌಧದ ಸಭಾಂಗಣದಲ್ಲಿ ಹೆಕ್ಸಾನ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀಧರ್ ಧರ್ಮರಾಜನ್ ಅವರೊಂದಿಗೆ ಒಪ್ಪಂದಕ್ಕೆ ಸಹಿ ಹಾಕಲಾಯಿತು.

ಈ ವೇಳೆ ಕೃಷಿ ಸಚಿವ ಬಿ.ಸಿ.ಪಾಟೀಲ್ ಮಾತನಾಡಿ, ಕೃಷಿ ಅಭಿವೃದ್ಧಿಯಲ್ಲಿ ಕರ್ನಾಟಕ ಮಹತ್ವದ ಹೆಜ್ಜೆಇಟ್ಟಿದ್ದು, ದೇಶದಲ್ಲಿಯೇ ಮೊದಲ ಸ್ಥಾನವನ್ನು ಪಡೆದಿದೆ. ಪ್ರಧಾನಿ ನರೇಂದ್ರ ಮೋದಿಯವರ ಕನಸಾಗಿರುವ ರೈತರ ಆದಾಯವನ್ನು ದ್ವಿಗುಣಗೊಳಿಸುವ ಯೋಜನೆಗೆ ಪೂರಕವಾಗಿ ರಾಜ್ಯ ಸರ್ಕಾರವು ಈ ಮಹತ್ವದ ಒಡಂಬಡಿಕೆಯನ್ನು ಮಾಡಿಕೊಂಡಿದೆ ಎಂದರು.

ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರ ಸಮಯದಲ್ಲಿ ಹೆಕ್ಸಾನ್ ಕಂಪನಿ ಜೊತೆ ಚರ್ಚಿಸಿ ಈ ಒಡಂಬಡಿಕೆಗೆ ಮುಂದಾಗಿದ್ದೆವು. ಸಿಎಂ ಮಾರ್ಗದರ್ಶನದಂತೆ ಹಣಕಾಸು ಇಲಾಖೆಯಿಂದ ಒಪ್ಪಿಗೆಯನ್ನು ಪಡೆದು ಒಡಂಬಡಿಕೆ ಮಾಡಿಕೊಳ್ಳುವ ಮೂಲಕ ಸರ್ಕಾರ ಎರಡನೇ ಹೆಜ್ಜೆ ಇಟ್ಟಿದೆ ಎಂದು ಹೇಳಿದರು.

ಕೃಷಿ ಚಟುವಟಿಕೆಗಳ ಕೌಶಲ್ಯ ಬಲವರ್ಧನೆಗೆ 700 ಕೋಟಿ ರೂ. ಮೌಲ್ಯದ ಒಡಂಬಡಿಕೆಯಾಗಿದ್ದು, ಈ ಒಡಂಬಡಿಕೆಯ ಮೂಲಕ ರಾಜ್ಯದ 4 ಕೃಷಿ ವಿಶ್ವವಿದ್ಯಾಲಯಗಳಲ್ಲಿ 7 ಸಿಐಡಿಎಸ್ಎ ಕೇಂದ್ರಗಳನ್ನು ಬೆಂಗಳೂರು, ಚಾಮರಾಜನಗರ, ಶಿವಮೊಗ್ಗ, ಧಾರವಾಡ, ವಿಜಯಪುರ, ಹನುಮನಮಟ್ಟಿ ಹಾಗೂ ಗಂಗಾವತಿಯಲ್ಲಿ ಸ್ಮಾರ್ಟ್ ಕೃಷಿ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು ಎಂದರು.

ಒಡಂಬಡಿಕೆ ಸಂದರ್ಭದಲ್ಲಿ ಹೆಕ್ಸಾನ್ ಕಂಪನಿ ವ್ಯವಸ್ಥಾಪಕ ನಿರ್ದೇಶಕ ಶ್ರೀಧರ್ ಧರ್ಮರಾಜನ್, ಕೃಷಿ ಇಲಾಖೆಯ ಅಪರ ಮುಖ್ಯಕಾರ್ಯದರ್ಶಿ ರಾಜಕುಮಾರ್ ಖತ್ರಿ, ಕೃಷಿ ಇಲಾಖೆ ನಿರ್ದೇಶಕ ಬಿ.ವೈ.ಶ್ರೀನಿವಾಸ್ ಸೇರಿದಂತೆ ಕೃಷಿ ವಿಶ್ವವಿದ್ಯಾಲಯದ ಉಪಕುಲಪತಿಗಳು ಇದ್ದರು.

ರೈತರಿಂದ ಭೂಮಿ ಪಡೆದು ಬಾಳೆ ಬೆಳೆಯಲು ಮುಂದಾದ ಎಂಜಿನಿಯರ್‌ಗಳು

ಬರಡು ಭೂಮಿಯಲ್ಲಿ ಕೃಷಿಗೆ ಸಿದ್ಧತೆ

• ಬಿಳಿಗಿರಿ ಆರ್.

ಜಯಪುರ(ಮೈಸೂರು ತಾಲ್ಲೂಕು): ಪಾಳು ಬಿದ್ದ ಬರಡು ಭೂಮಿಯನ್ನು ಕೃಷಿ ಯೋಗ್ಯ ಭೂಮಿಯನ್ನಾಗಿ ಪರಿವರ್ತಿಸಿ, ರೈತರಿಗೆ ಆದಾಯ ತಂದುಕೊಡಲು ಎಂಜಿನಿಯರ್‌ಗಳಿಬ್ಬರು 'ಪ್ರಾಜೆಕ್ಟ್ ಹಗ್ ಕಂಪನಿ' ಸ್ಥಾಪಿಸಿದ್ದಾರೆ. ಹೋಬಳಿಯ ದಾರಿಪುರ ಗ್ರಾಮದಲ್ಲಿ ಪ್ರಾಯೋಗಿಕವಾಗಿ 10 ಎಕರೆ ಪ್ರದೇಶದಲ್ಲಿ ಬಾಳೆ ಬೆಳೆಯಲು ಸಿದ್ಧತೆ ನಡೆಸಿದ್ದಾರೆ.

ಮೈಸೂರು ನಿವಾಸಿಗಳಾದ ಸೋಮಸುಂದರ್ ಹಾಗೂ ಲೆವಿನ್ ಲಾರೆನ್ಸ್ ಕಂಪನಿಯ ಸ್ಥಾಪಕರು. ಪ್ರಗತಿಪರ ಕೃಷಿಕ ಶರವಣ ಅವರ ಮಾರ್ಗದರ್ಶನದಲ್ಲಿ ಕೃಷಿ ಚಟುವಟಿಕೆ ನಡೆಸಲು ಮುಂದಾಗಿದ್ದಾರೆ. ಕಂಪನಿಗೆ ಶರವಣ ಅವರನ್ನೇ ಮುಖ್ಯಸ್ಥರನ್ನಾಗಿ ನೇಮಿಸಿದ್ದಾರೆ.

ಪ್ರಜಾವಾಣಿ ವಿಶೇಷ



ಜಯಪುರ ಹೋಬಳಿಯ ದಾರಿಪುರ ಗ್ರಾಮದಲ್ಲಿ ಬರಡು ಭೂಮಿಯನ್ನು ಯಂತ್ರದ ಸಹಾಯದಿಂದ ಹದಗೊಳಿಸುವ ಪ್ರಯತ್ನ ನಡೆದಿದೆ

'ರೈತರ ಆದಾಯ ದ್ವಿಗುಣ'

'ವೈಜ್ಞಾನಿಕ ಕೃಷಿ ಪದ್ಧತಿ ಅಳವಡಿಸಿಕೊಳ್ಳಲಿದ್ದು, ಸಾವಯವ ಕೃಷಿಗೂ ಒತ್ತು ನೀಡಲಾಗುತ್ತದೆ. ಮಳೆಯಾಶ್ರಿತ ಪ್ರದೇಶದಲ್ಲಿ ಸಿರಿಧಾನ್ಯಗಳನ್ನು ಬೆಳೆಯಲು ಯೋಜಿಸಲಾಗಿದೆ. ರೈತರಿಗೆ ನುರಿತ ಕೃಷಿ ತಂತ್ರಜ್ಞರಿಂದ ಮಾರ್ಗದರ್ಶನ ದೊರಕಿಸುವುದರ ಜೊತೆಗೆ ಹವಾಗುಣಕ್ಕೆ ಅನುಗುಣವಾಗಿ ಬೆಳೆ ಪದ್ಧತಿಯನ್ನು ನಿರ್ಧರಿಸಲಾಗುವುದು' ಎಂದು ಪ್ರಾಜೆಕ್ಟ್ ಹಗ್ ಕಂಪನಿ ಮುಖ್ಯಸ್ಥ ಶರವಣ ತಿಳಿಸಿದರು.

ರೈತರೊಂದಿಗೆ ಒಪ್ಪಂದ ಮಾಡಿಕೊಂಡು ಬರಡು ಭೂಮಿ ಪಡೆದು, ಫಲವತ್ತಾದ ಭೂಮಿಯನ್ನಾಗಿ ಪರಿವರ್ತಿಸಲಾಗುತ್ತದೆ. ಅಲ್ಲಿ ಬೆಳೆ ಬೆಳೆಯಲು ಬಿತ್ತನೆ ಬೀಜ, ಗೊಬ್ಬರ,



15 ಎಂಜಿನಿಯರ್‌ಗಳು ಕೃಷಿಗೆ ಆಸಕ್ತಿ ತೋರಿಸಿದ್ದಾರೆ. ಮತ್ತಷ್ಟು ರೈತರ ಬರಡು ಭೂಮಿಯಲ್ಲಿ ಕೃಷಿ ಚಟುವಟಿಕೆ ನಡೆಸಬಹುದು
ಸೋಮಸುಂದರ್
ಪ್ರಾಜೆಕ್ಟ್ ಹಗ್ ಕಂಪನಿ ಸ್ಥಾಪಕ

ಕೃಷಿ ಪರಿಕರಗಳು, ಕೂಲಿಕಾರ್ಮಿಕರ ವೆಚ್ಚವನ್ನೂ ಭರಿಸಿ, ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆಯನ್ನೂ ಕಂಪನಿಯೇ ಒದಗಿಸಲಿದೆ. ರೈತ ಜಮೀನಿನ ಬೆಳೆಯನ್ನು ನೋಡಿಕೊಳ್ಳಬೇಕಷ್ಟೇ. ಬಂದ ಆದಾಯದಲ್ಲಿ ಶೇ 50ರಷ್ಟನ್ನು ರೈತರಿಗೆ ನೀಡಲಾಗುತ್ತದೆ.

5ನೇ ಪುಟ ನೋಡಿ